ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಪತ್ರಿಕಾ ಪ್ರಕಟಣೆ/2019 ದಿನಾಂಕ: 25-07-2019

## ಪತ್ರಿಕಾ ಪ್ರಕಟಣೆ

ಡಿಪ್ಲೊಮ ಫಾರ್ಮಸಿಯಲ್ಲಿ ಅರ್ಹತೆಯನ್ನು ಪಡೆದು ಬಿ. ಫಾರ್ಮ ಲ್ಯಾಟರಲ್ ಪ್ರವೇಶ ಪಡೆಯುವುದಕ್ಕೆ ಸಿಇಟಿ-2019 ಕ್ಕೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು, ದಾಖಲಾತಿ ಪರಿಶೀಲನೆಗೆ ದಿನಾಂಕ 01-08-2019 ರಂದು (ಬೆ.10.30 ರಿಂದ ಮ.1.00) ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಎಲ್ಲಾ ಮೂಲ ದಾಖಲೆಗಳೊಂದಿಗೆ ಹಾಜರಾಗಲು ಸೂಚಿಸಿದೆ.

ಅನುಬಂಧ 'ಎ' - ದಾಖಲಾತಿ ಪರಿಶೀಲನೆಗೆ ಹಾಜರು ಪಡಿಸಬೇಕಾದ ಮೂಲ ದಾಖಲೆಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

**ಈ ಮುಂದೆ ಹೇಳಿರುವ ಮೂಲ ದಾಖಲೆಗಳು ಮತ್ತು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿರುವ ಅವುಗಳ ಜೆರಾಕ್ಸ್ ಪ್ರತಿಗಳ ಒಂದು ಸೆಟ್ಟನ್ನು, ಈ ಮುಂದೆ ಹೇಳಲಾಗಿರುವ ಅನುಕ್ರಮಣಿಕೆಯ ಕ್ರಮದಲ್ಲಿ ಜೋಡಿಸಿಕೊಳ್ಳಬೇಕು ಮತ್ತು ಹಾಗೆಯೇ, ಅವುಗಳನ್ನು ದಾಖಲೆಗಳ ಪರಿಶೀಲನೆಗೆ ಸಂಬಂಧಿಸಿದ ಕೌಂಟರ್‌ನಲ್ಲಿ ಪರಿಶೀಲನೆಗಾಗಿ ಹಾಜರುಪಡಿಸಬೇಕು.**

ಎ. **ಸಾಮಾನ್ಯ ಪ್ರವೇಶ ಪರೀಕ್ಷೆ-2019ಕ್ಕೆ ಭರ್ತಿ ಮಾಡಿ ಸಲ್ಲಿಸಿರುವ ಆನ್‌ಲೈನ್ ಅರ್ಜಿ ನಮೂನೆಯ ಅಂತಿಮ ಪ್ರತಿ.**

ಸಿ. **"ಸಾಮಾನ್ಯ ಪ್ರವೇಶ ಪರೀಕ್ಷೆ 2019"ರ ಮೂಲ ಪ್ರವೇಶ ಪತ್ರ**

ಡಿ. **ಎಸ್‌ಎಸ್‌ಎಲ್‌ಸಿ/ 10ನೇ ತರಗತಿಯ ಅಂಕಪಟ್ಟಿ**

ಇ. **ಎರಡು ವರ್ಷದ ಡಿಪ್ಲೊಮ ಫಾರ್ಮಸಿ ಅಂಕಪಟ್ಟಿಗಳು**

ಎಫ್. **ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ/ ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರು ಮೇಲುರುಜು ಸಹಿ ಮಾಡಿರುವ ವ್ಯಾಸಂಗ ಪ್ರಮಾಣಪತ್ರ.**

ಜಿ. **ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಎರಡು ಭಾವಚಿತ್ರಗಳು**

**ಮುಂದಿನ ದಾಖಲೆಗಳನ್ನು "ಅನ್ವಯವಾಗುವಂತಿದ್ದ ಪಕ್ಷದಲ್ಲಿ ಮಾತ್ರ" ಹಾಜರುಪಡಿಸತಕ್ಕದ್ದು:**

ಹೆಚ್. **"ಸಂಖ್ಯಾಧಿಕ ಕೋಟಾ"** (supernumerary quota) **ದ ಸೀಟುಗಳನ್ನು ಕೋರುವುದಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ತಹಸೀಲ್ದಾರ್‌ರವರಿಂದ ಪಡೆದುಕೊಂಡಿರುವ ಆದಾಯ ಪ್ರಮಾಣಪತ್ರ**

ಐ. **ಕನ್ನಡ ಮಾಧ್ಯಮ ಮೀಸಲಾತಿ ಪ್ರಯೋಜನವನ್ನು ಕೋರುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುರುಜು ಮಾಡಿರುವ ಕನ್ನಡ ಮಾಧ್ಯಮ ಪ್ರಮಾಣಪತ್ರ.**

ಜೆ. **ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುರುಜು ಮಾಡಿರುವ ಗ್ರಾಮೀಣ ವ್ಯಾಸಂಗ ಪ್ರಮಾಣಪತ್ರ ಮತ್ತು ಪರಿಶೀಲನಾ ಪ್ರಮಾಣಪತ್ರ (ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ)**

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru – 560 012.

ಕೆ. ಮೀಸಲಾತಿ ಪ್ರಯೋಜನಗಳನ್ನು ಕೋರುವುದಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ತಹಸೀಲ್ದಾರ್‌ರವರಿಂದ ಪಡೆದಿರುವ ಜಾತಿ ಪ್ರಮಾಣ ಪತ್ರ / ಜಾತಿ ಮತ್ತು ಆದಾಯ ಪ್ರಮಾಣಪತ್ರ / ಆದಾಯ ಪ್ರಮಾಣ ಪತ್ರಗಳು (ಅಧಿಕಾರವ್ಯಾಪ್ತಿಯಿರುವ ಸಂಬಂಧಪಟ್ಟ ತಹಸೀಲ್ದಾರ್‌ರವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂದರ್ಭದಲ್ಲಿ ನಮೂನೆ 'ಡಿ' ನಲ್ಲಿ ಮತ್ತು ಪ್ರವರ್ಗ-1ರ ಸಂದರ್ಭದಲ್ಲಿ ನಮೂನೆ 'ಇ' ನಲ್ಲಿ ಇತರ ಹಿಂದುಳಿದ ವರ್ಗಗಳಾದ 2ಎ, 2ಬಿ, 3ಎ ಮತ್ತು 3ಬಿಗಳಂತಹ ಸಂದರ್ಭದಲ್ಲಿ ನಮೂನೆ 'ಎಫ್' ನಲ್ಲಿ ನೀಡಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು)

ಸೂಚನೆ: ಅಲ್ಲದೆ, ಮೀಸಲು ಪ್ರವರ್ಗದಡಿಯಲ್ಲಿ ಸೀಟನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ಕ್ಕೆ ಸೇರಿರುವ ವಿದ್ಯಾರ್ಥಿಗಳು, ಅಧಿಕಾರವ್ಯಾಪ್ತಿಯ ತಹಸೀಲ್ದಾರ್‌ರವರು ನೀಡಿರುವ ಆದಾಯ ಪ್ರಮಾಣಪತ್ರವನ್ನು ಸಹ ಪರಿಶೀಲನೆಗಾಗಿ ಹಾಜರುಪಡಿಸಬೇಕು.

ಆದರೆ, ವಿದ್ಯಾರ್ಥಿ/ನಿ, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ, ಮೀಸಲಾತಿ ಪ್ರಯೋಜನವನ್ನು ಕೋರಿದ್ದ ಪಕ್ಷದಲ್ಲಿ ಮಾತ್ರ ಅವರು ಜಾತಿ, ಪ್ರವರ್ಗ ಮತ್ತು ಆದಾಯದ ಸೌಲಭ್ಯಗಳನ್ನು ಕೋರಲು ಅರ್ಹರಾಗಿರುತ್ತಾರೆ.

ಎಲ್. ಹೈದರಾಬಾದ್-ಕರ್ನಾಟಕ ಪ್ರದೇಶ ಮೀಸಲಾತಿ (ಅನುಚ್ಛೇದ 371 (ಜೆ))ಯನ್ನು ಕೋರುವ ವಿದ್ಯಾರ್ಥಿಗಳು, ಸಂಬಂಧಪಟ್ಟ ಉಪ ವಿಭಾಗಾಧಿಕಾರಿ (ಅಸಿಸ್ಟೆಂಟ್ ಕಮಿಷನರ್)ಅವರು ಅನುಬಂಧ-ಎ (ಅರ್ಹತಾ ಪ್ರಮಾಣಪತ್ರ- ನಿಯಮ 3(3))ರಲ್ಲಿ ನೀಡಿರುವ ಪ್ರಮಾಣಪತ್ರವನ್ನು ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಸಲ್ಲಿಸಬೇಕು.

ಎಂ. ತಂದೆ-ತಾಯಿ/ ಪೋಷಕರ, ವಾಸ ಸ್ಥಳ/ ವ್ಯಾಸಂಗ/ ಉದ್ಯೋಗದ ಆಧಾರದ ಮೇಲೆ ಸರ್ಕಾರಿ ಸೀಟುಗಳಿಗೆ ಸಂಬಂಧಿಸಿದಂತೆ ಅರ್ಹತೆಯನ್ನು ಕೋರುವ ವಿದ್ಯಾರ್ಥಿಗಳು, ಅವರ ತಂದೆ-ತಾಯಿ/ ಪೋಷಕರ ವ್ಯಾಸಂಗ ಪ್ರಮಾಣಪತ್ರ/ ತಂದೆ-ತಾಯಿ/ ಪೋಷಕರ ಸ್ವಂತ ಪಟ್ಟಣ/ ಸ್ವಂತ ಊರಿನ ಪ್ರಮಾಣಪತ್ರ/ ತಂದೆ-ತಾಯಿ/ಪೋಷಕರ ವಾಸಸ್ಥಳದ ಪ್ರಮಾಣಪತ್ರ/ ತಂದೆ-ತಾಯಿ/ ಪೋಷಕರ ಉದ್ಯೋಗ ಪ್ರಮಾಣಪತ್ರ/ ತಂದೆ-ತಾಯಿ/ ಪೋಷಕರ ಸಂಚಿತ ದಾಖಲೆ/ ತಂದೆ-ತಾಯಿ/ಪೋಷಕರ ಅಂಕಪಟ್ಟಿ ಮೊದಲಾದವುಗಳನ್ನು ಹಾಜರುಪಡಿಸಬೇಕು.

ಎನ್. ಹೊರನಾಡು ಮತ್ತು ಗಡಿನಾಡು ಕನ್ನಡಿಗ ಕೋಟಾದ ಅಡಿಯಲ್ಲಿ ಅರ್ಹತೆಯನ್ನು ಕೋರುವಂತಹ ವಿದ್ಯಾರ್ಥಿಗಳು ಯುಕ್ತವಾಗಿ

ಘೋಷಿಸಿರುವ ಅಫಿಡವಿಟ್ಟನ್ನು ಹಾಜರುಪಡಿಸಬೇಕು (ಖಂಡ ಸಿ & ಡಿ).

ಒ. ಜಮ್ಮು ಮತ್ತು ಕಾಶ್ಮೀರದ ವಲಸಿಗರ ಕೋಟಾದ ಅಡಿಯಲ್ಲಿ ಸರ್ಕಾರಿ ಸೀಟುಗಳಿಗೆ ಸಂಬಂಧಿಸಿದಂತೆ ಅರ್ಹತೆಯನ್ನು ಕೋರುವ ವಿದ್ಯಾರ್ಥಿಗಳು, ಅಧಿಕಾರವ್ಯಾಪ್ತಿಯ ಜಿಲ್ಲಾಧಿಕಾರಿ/ ಜಿಲ್ಲಾ ದಂಡಾಧಿಕಾರಿ/ ಪುನರ್ವಸತಿ ಆಯುಕ್ತರು ನೀಡಿರುವ ಗುರುತಿನ ಚೀಟಿಯನ್ನು ಹಾಜರುಪಡಿಸಬೇಕು.

ಸಹಿ/-

ಆಡಳಿತಾಧಿಕಾರಿ